ಅಸಲು ದಾವೆ ಸಂಃ 3/2024
ಪಿ.ಡಬ್ಲ್ಯೂಃ1

ಈ ದಿನ ದಿನಾಂಕಃ 10-07-2025 ರಂದು ಸಾಕ್ಷಿಯನ್ನು ಇಂದು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

**ಪಾಟೀಸವಾಲು ಪ್ರತಿವಾದಿ ಪರ ವಕೀಲರಿಂದಃ**

1. ನಾನು ಸ್ನಾತಕೋತ್ತರ ಪದವೀಧರ. ನಾನು ಈ ದಾವೆಯನ್ನು ನಮ್ಮ ಸ್ವಾಧೀನಕ್ಕ ಅಡ್ಡಿಪಡಿಸುತ್ತಿರುವ ಕುರಿತು ದಾಖಲಿಸಿದ್ದೇನೆಯೇ ಹೊರತು ಯಾವುದೇ ಪರಿಹಾರವನ್ನು ಕೋರಿಲ್ಲ. ಈ ದಾವೆಯನ್ನು ಸ.ನಂ.4/1 ಮತ್ತು 4/2ರ ಸರ್ವೆ ನಂಬರ್ ಗಳು ಕುರಿತು ಹೂಡಿದ್ದೇನೆ . ಸ.ನಂ.5/4 ನನಗೆ ಸೇರಿದ ಸರ್ವೆ ನಂಬರ್ ಆಗಿದೆ. ಸದರಿ ಆಸ್ತಿಯಲ್ಲಿ ಒಟ್ಟು ವಿಸ್ತೀರ್ಣ 2 ಎಕರೆ 8 ಗುಂಟೆ 12 ಸೆಂಟ್ ಕರಾಬು ವಿಸ್ತೀರ್ಣ 22 ಗುಂಟೆ , ಸಾಗುವಳಿ ವಿಸ್ತೀರ್ಣ 1 ಎಕರೆ 26 ಗುಂಟೆ 12 ಸೆಂಟು ಇದೆ. ಸದರಿ ಆಸ್ತಿ ನಮ್ಮ ಕುಟುಂಬಕ್ಕೆ ಪಿತ್ರರ್ಜಿತವಾಗಿ ಬಂದಿರುತ್ತದೆ. ದಸರಿ ಆಸ್ತಿ ನಮ್ಮ ಅಜ್ಜನಿಂದ ನನ್ನ ತಂದೆಗೆ ಬಂದಿರುತ್ತದೆ. ಸದರಿ ವಿಚಾರವನ್ನು ನನ್ನ ದಾವೆಯಲ್ಲಿ ನಮೂದಿಸಿರುತ್ತೇನೆ. ಸದರಿ ಆಸ್ತಿ ನನ್ನ ತಂದೆಗೆ ಪಾಲು ಪರಿಕತ್ತಿನ ಮುಖಾಂತರ 2006 ರಲ್ಲಿ ಬಂದಿರುತ್ತದೆ. ಸದರಿ ವಿಭಾಗದ ಸಮಯಕ್ಕೆ ಸದರಿ ಆಸ್ತಿಯ ಸ.ನಂ.5/3 ಎಂದು ಇದ್ದು ಪೋಡು ದುರಸ್ಥಿ ಆದ ನಂತರ 5/4 ಎಂದು ಹೊಸ ಸಂಖ್ಯೆಯನ್ನು ನೀಡಲಾಗಿದೆ. ಸದರಿ ಪೋಡಿ ದುರಸ್ಥಿಯಾದ ಬಗ್ಗೆ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಸದರಿ ಜಮೀನಿನಲ್ಲಿ ಸುಮಾರು 12 ವರುಷದ ಅಡಿಕೆ ಗಿಡಗಳು ಇವೆ.

2. ಪ್ರತಿವಾದಿಗಳ ಆಸ್ತಿಯಲ್ಲಿಯೂ ಸಹ 12 ವರುಷದ ಅಡಿಕೆ ಗಿಡಗಳು ಇವೆ ಎಂದರೆ ನನಗೆ ಗೊತ್ತಿಲ್ಲ. ಸಾಮಾನ್ಯವಾಗಿ ಅಡಿಕೆ ತೋಟ ಮಾಡುವ ಮುನ್ನ ಹದ್ದು ಬಸ್ತು ಮಾಡಿಸಿ ನಂತರ ತೋಟ ಮಾಡುತ್ತಾರೆ ಎಂದರೆ ಸರಿ. ನನ್ನ ಜಮೀನಿನ ಉತ್ತರ ಭಾಗಕ್ಕೆ ಹಿಡುವಳಿದಾರರು ಇದ್ದಾರೆ. ನನ್ನ ಜಮೀನಿನ ಉತ್ತರ ಭಾಗಕ್ಕೆ ಹೊಂದಿಕೊಂಡಂತೆ ಮೊದಲಿಗೆ ಹನುಮಂತಪ್ಪ ಬಿನ್ ನಾರಾಯಣ್ಣಪ್ಪ ರವರ ಜಮೀನು ಇದೆ. ಎರಡನೇಯದಾಗಿ ರುದ್ರಪ್ಪ ಬಿನ್ ದೇವೆಂದ್ರಪ್ಪ ಅವರ ಜಮೀನುಇದೆ, ಮೂರನೆಯದಾಗಿ ಹನುಮಂತಪ್ಪ ಬಿನ್ ಗೆದ್ದಲ ಹಟ್ಟಿ ರಂಗಪ್ಪ / ಪ್ರತಿವಾದಿ ಜಮೀನು ಇದೆ.

3. ನಮ್ಮಮತ್ತು ಪ್ರತಿವಾದಿಗಳ ಜಮೀನುಗಳು ಪೂರ್ವ ಪಶ್ಚಿಮವಾಗಿ ಪಟ್ಟಿ ಆಕಾರದಲ್ಲಿ ಇವೆ ಎಂದರೆ ಸರಿಯಲ್ಲ. ಹನುಮಂತಪ್ಪ ಬಿನ್ ನಾರಾಯಣ್ಣಪ್ಪ , ರುದ್ರಪ್ಪ ಬಿನ್ ದೇವೆಂದ್ರಪ್ಪರವರ ಜಮೀನಿನ ವಿಸ್ತೀರ್ಣ ನನಗೆ ಗೊತ್ತಿಲ್ಲ. ಪ್ರತಿವಾದಿಗಳ ಜಮೀನ ವಿಸ್ತೀರ್ಣ ನನಗೆ ಗೊತ್ತಿಲ್ಲ. ಮೂರು ಜನ ಪ್ರತಿವಾದಿಗಳಿಗೆ ಪ್ರತ್ಯೇಕವಾಗಿ ತಲಾ 20 ಗುಂಟೆ ಜಮೀನು ನಮ್ಮ ಜಮೀನಿನ ಉತ್ತರ ಭಾಗಕ್ಕೆ ಇದೆ ಎಂದರೆ ನನಗೆ ಗೊತ್ತಿಲ್ಲ. ರುದ್ರಪ್ಪ ಬಿನ್ ದೇವೆಂದ್ರಪ್ಪ ನವರ ಜಮೀನಿನಲ್ಲಿ ಸುಮಾರು 15 ವರ್ಷದ ತೆಂಗಿನ ಮರಗಳು ಇವೆ ಎಂದರೆ ಸರಿ. ಆದರೆ ಯಾರದ್ದು ಎಂದು ಗೊತ್ತಿಲ್ಲ ಎಂದು ನುಡಿಯುತ್ತಾರೆ. ನಾನು ಪ್ರತಿದಿನ ಸದರಿ ರುದ್ರಪ್ಪನ ಜಮೀನಿನ ಮೂಲಕವೇ ನಮ್ಮ ತೋಟಕ್ಕೆ ಹೋಗುತ್ತೇನೆ ಎಂದರೆ ಸಾಕ್ಷಿ ನಮ್ಮ ಜಮೀನಿನಲ್ಲಿ ಹೋಗುತ್ತೇನೆ ಎಂದು ನುಡಿಯುತ್ತಾರೆ.

4. ನಮ್ಮ ಜಮೀನಿನ ಪೂರ್ವಕ್ಕೆ ಹೊಸಕಟ್ಟೆ ಹಳ್ಳ ಇದೆ ಎಂದರೆ ಸರಿಯಲ್ಲ. ನಾನು ಮೇಲೆ ಹೇಳಿದ 22 ಗುಂಟೆ ಖರಾಬು ಸದರಿ ಹಳ್ಳವೇ ಎಂದರೆ ಸರಿಯಲ್ಲ. ನಿಪಿ.6ರ ಲ್ಲಿ ಉಲ್ಲೇಖವಿರುವ 2ನೇ ಷೆಡ್ಯೂಲ್ ನಲ್ಲಿ ಸ.ನಂ.5/3 ರಲ್ಲಿ ನನ್ನ ತಂದೆ ರಾಜಪ್ಪ ಬಿನ್ ನಿಂಗಪ್ಪ ನಿಗೆ ಸೇರಿದ ಆಸ್ತಿ ಸಂ.1 ರಲ್ಲಿ 38 ಗುಂಟೆ ಖರಾಬು ಎಂದು ನಮೂದು ಇದೆ ಎಂದರೆ ಸರಿ. ಸದರಿ 38 ಗುಂಟೆ ಖರಾಬು ಜಮೀನು ಹೊಸಕಟ್ಟೆ ಹಳ್ಳಕ್ಕೆ ಸಂಬಂಧಿಸಿದ ಆಸ್ತಿ ಎಂದರೆ ಸರಿಯಲ್ಲ. ಸದರಿ ಹಳ್ಳ ಮತ್ತು ನಮಗೆ ಸೇರಿದ 6 ಎಕರೆ 27 ಗುಂಟೆ ಜಮೀನು ನನ್ನ ತಂದೆಗೆ ಸೇರಿದ ಜಮೀನು ಎಂದರೆ ಸರಿ. ಸಾಕ್ಷಿ ಮುಂದುವರೆದು ಸದರಿ 38 ಗುಂಟೆ ಖರಾಬು ನಮಗೆ ಬಂದಿಲ್ಲ ಎಂದು ನುಡಿಯುತ್ತಾರೆ. ಸದರಿ 38 ಗುಂಟೆ ಖರಾಬು ಜಮೀನು ಮತ್ತು ಹಿಡುವಳಿ ಜಮೀನು ಯಾರು ಸಾಗು ಮಾಡುತ್ತಿದ್ದಾರೆ ಎಂದರೆ ಸಾಕ್ಷಿ ಆ ಯಾ ಸರ್ವೆ ನಂಬರ್ ನ ಸಾಗುವಳಿದಾರರೇ ಸಾಗು ಮಾಡುತ್ತಿದ್ದಾರೆ ಎಂದು ನುಡಿಯತ್ತಾರೆ.

5. ನಮ್ಮ ಕುಟುಂಬಕ್ಕೆ ನಿಪಿ.6 ರಂತೆ ವಿಭಾಗ ಆಗುವ ಮುನ್ನ ಸದರಿ 38 ಗುಂಟೆ ಖರಾಬು ಜಮೀನು ಮತ್ತು ಹಿಡುವಳಿ ಜಮೀನು ಇತ್ತು ಎಂದರೆ ಸರಿ. ಸದರಿ ಸ್ವತ್ತನ್ನು ನಾನು ಮತ್ತು ನಮ್ಮ ಕುಟುಂಬಸ್ಥರೇ ಸಾಗು ಮಾಡುತ್ತಿದ್ದೇವೆ ಎಂದರೆ ಸರಿ. 2020-2021 ರಲ್ಲಿ ಹೊಸಕಟ್ಟೆ ಹಳ್ಳದಿಂದ ಮಾಲಿಂಗಪ್ಪ ನ ಜಮೀನಿನ ವರೆಗೂ ನರೇಗಾ ಯೋಜನೆ ಅಡಿ ಪಂಚಾಯತಿಯವರು ಸುಮಾರು 15 ಅಡಿ ಅಳತೆಯ ರಸ್ತೆಯನ್ನು ನಿರ್ಮಾಣ ಮಾಡಿರುತ್ತಾರೆ ಎಂದರೆ ಸರಿ. ಸದರಿ ರಸ್ತೆಯ ಪೂರ್ವಕ್ಕೆ ಹೊಸಕಟ್ಟೆ ಹಳ್ಳ ಬರುತ್ತದೆ ಎಂದರೆ ಸರಿ. ಸದರಿ ಹಳ್ಳದ ಪೂರ್ವಕ್ಕೆ ನಮ್ಮ ಜಮೀನು ಇದೆ ಎಂದರೆ ಸರಿ. ಸದರಿ ಹಳ್ಳ ತಗ್ಗಿನಲ್ಲಿ ಇರುವ ಕಾರಣ ಸುತ್ತ ಮುತ್ತಲ ಪ್ರದೇಶದ ಮಳೆ ನೀರು ಸದರಿ ಹಳ್ಳದಲ್ಲಿ

ಸಂಗ್ರವಾಗುತ್ತದೆ ಎಂದರೆ ಸರಿ. ನಮ್ಮ ಗ್ರಾಮದ 8 ರಿಂದ 10 ರೈತರು ಸದರಿ ಹಳ್ಳದಿಂದ ಪೈಪ್ ಲೇನ್ ನ್ನು ಹಾಕಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಹಳ್ಳದಿಂದ ಪ್ರತಿವಾದಿಗಳೂ ಸಹ ಪ್ಪೆಪ್ ಲೈನ್ ಪಡೆದಿರುತ್ತಾರೆ ಎಂದರೆ ಸಾಕ್ಷಿ ಇರಬಹುದು ನಾನು ಗಮನಿಸಿಲ್ಲ ಎಂದು ನುಡಿಯುತ್ತಾರೆ.

ಪ್ರತಿವಾದಿ ವಕೀಲರು ಮುಂದುವರೆದ ಪಾಟೀಸವಾಲಿಗೆ ಕಾಲಾವಕಾಶ ಕೋರಿದ್ದರಿಂದ ಕಾಲಾವಕಾಶ ನೀಡಲಾಯಿತು.

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಪಡಿಸಲಾಯಿತು)**

**ಓ.ಹೇ.ಕೇ. ಸರಿ ಇದೆ.**

1ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ.ಚನ್ನಗಿರಿ.